# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ–118/ವಾರ್ಡ್‌ಸಭೆ/2021–22 ದಿನಾಂಕ: 19/3/22

## ವಾರ್ಡ್ –118ರ ವಾರ್ಡ್ ಸಭೆಯ ನಡವಳಿ

ದಿನಾಂಕ:19–03–2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–118ರ ವಾರ್ಡ್ ಕಛೇರಿಯಲ್ಲಿ ಡಾ!!. ಚಂದ್ರಯ್ಯ.ಟಿ. ಉಪ ನಿರ್ದೇಶಕರು ಪಶುಪಾಲನೆ ವಾರ್ಡ್–118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:–

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಚಂದ್ರಯ್ಯ.ಟಿ. | ನೋಡಲ್ ಅಧಿಕಾರಿಗಳು | 9902041310 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಎಸ್.ಕುಮಾರ್‌ವೇಲು | ಹಿರಿಯ ಆರೋಗ್ಯ ಪರಿವೀಕ್ಷಕರು | 9480688745 |
| 4 | ಶ್ರೀಮತಿ. ಚಂದ್ರಕಾಂತ | ಸಹಾಯಕ ಕಂದಾಯ ಅಧಿಕಾರಿ | 9480684432 |
| 5 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 6 | ಶ್ರೀ.ಶಿವಕುಮಾರ್ | ಸ್ಥಳಿಯರು | 9945856252 |
| 7 | ಶ್ರೀ.ಫಣಿ | ಸ್ಥಳಿಯರು | 995597090 |
| 8 | ಶ್ರೀ.ಬಿ.ಚಿಕ್ಕನಾಗೇಶ್ | ಸ್ಥಳಿಯರು | 9632662517 |
| 9 | ಶ್ರೀ.ಜಿ.ವೇಲು | ಸ್ಥಳಿಯರು | 9980693097 |
| 10 | ಶ್ರೀ.ಎಸ್.ವಿ.ಸೆಲ್ವಂ | ಸ್ಥಳಿಯರು | 9739224556 |
| 11 | ಶ್ರೀ.ಬಿ.ಎಲ್.ಅರವಿಂದ್ | ಸ್ಥಳಿಯರು | 9448314149 |
| 12 | ಶ್ರೀಮತಿ. ಶಾಂತಿ | ಆರೋಗ್ಯ ಇಲಾಖೆ | 8147722625 |
| 13 | ಡಾ!!. ರಕ್ಷ ಆರ್ ನಾಯಕ್ | | 8073396070 |
| 14 | ವಿಜಯ್ ಬಿ ವಾಗಿ | ಪಿ.ಎಸ್.ಐ (ಜೆ513135320) | – |
| 15 | ಶ್ರೀ ಎಂ. ಶಂಕರ್ | ಟಿ.ಐ | 7013355354 |
| 16 | ಶ್ರೀ.ಸಿ.ವಿಜಯನ್ | ಟಿ.ಐ | 9902783269 |
| 17 | ಶ್ರೀ. ಪಿ.ಗಿರೀಶ್ ಪಟ್ಟಪ್ಪ | ಸ್ಥಳಿಯರು | 8722222223 |

3. ಆರೋಗ್ಯ

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

## ಚರ್ಚಿಸಲಾದ ವಿಷಯಗಳು:-

### 1. ಕಾಮಗಾರಿ ಇಲಾಖೆ:-

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಶ್ರೀ.ಗಿರೀಶ್ ರವರು ಮಾತನಾಡಿ ಕೆ.ಎಸ್.ಗಾರ್ಡನ್ ಶೌಚಾಲಯಗಳನ್ನು ನವೀಕರಣ ಮಾಡಿಕೊಡಬೇಕೆಂದು ಕೋರಿರುತ್ತಾರೆ, ಹಾಗೂ ನಾಲಾ ರಸ್ತೆಯಲ್ಲಿ ಮಾಡಿರುವಂತ ಮೋರಿಯನ್ನು ರಾಜಕಾಲುವೆಗೆ ಸೇರಿಸಿರುವುದಿಲ್ಲ ಈ ವಿಷಯವಾಗಿ ಬೃಹತ್ ನೀರುಗಾಲುವೆ ಅಧಿಕಾರಿಗಳನ್ನು ಕೇಳಿದಾಗ ಅವರು ಬೆಸ್ಕಾಂ ಕೇಬಲ್ ಸ್ಥಳಾಂತರಗೊಳಿಸಬೇಕಾಗಿರುವುದರಿಂದ ಮೋರಿಯನ್ನು ಸೇರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಕೇಬಲ್ ಸ್ಥಳಾಂತರಗೊಳಿಸಿದ ನಂತರ ಮೋರಿಯನ್ನು ರಾಜಕಾಲುವೆಗೆ ಸೇರಿಸಲಾಗುವುದೆಂದು ತಿಳಿಸಿರುತ್ತಾರೆ. ನಂತರದಲ್ಲಿ ಶ್ರೀ.ಶ್ರೀನಿವಾಸ ರವರು ಮಾತನಾಡಿ ಲಾಲಾಬಾಗ್ 3ನೇ ಮತ್ತು 4ನೇ ರಸ್ತೆಯ ಮಧ್ಯದಲ್ಲಿ ರಸ್ತೆ ಒತ್ತುವರಿ ಮಾಡಿ ಕಟ್ಟಡವನ್ನು ನಿರ್ಮಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಹಾಗೂ ಊರ್ವಶಿ ಚಿತ್ರಮಂದಿರದ ಎದುರು ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಿಸುತ್ತಿರುತ್ತಾರೆಂದು ತಿಳಿಸಿರುತ್ತಾರೆ. ಸಹಾಯಕ ಅಭಿಯಂತರರು ಮತನಾಡಿ ಈ ಮೇಲ್ಕಂಡ ಎರಡು ಕಟ್ಟಡಗಳಿಗೆ ಈಗಾಗಲೇ ನಗರ ಯೋಜನೆ ದಕ್ಷಿಣ ರವರಿಂದ ಕಟ್ಟಡ ಮಂಜೂರಾತಿ ನಕ್ಷೆ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಲಾಲಾಬಾಗ್ 3ನೇ ಮತ್ತು 4ನೇ ರಸ್ತೆಯ ಮಧ್ಯದಲ್ಲಿ ರಸ್ತೆ ಒತ್ತುವರಿ ಮಾಡಿ ಕಟ್ಟಡವನ್ನು ನಿರ್ಮಿಸುತ್ತಿರುವುದು ನಗರ ಯೋಜನೆ ದಕ್ಷಿಣ ರವರ ವ್ಯಾಪ್ತಿಗೆ ಬರುವುದರಿಂದ ಅವರೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ.

### 2. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಷಯವಾಗಿ ಶ್ರೀ.ಚಿಕ್ಕನಾಗೇಶ ರವರು ಸಭೆಯಲ್ಲಿ ಮತನಾಡಿ ಎ.ಎಂ. ರಸ್ತೆಯಲ್ಲಿ ತರಕಾರಿ ಮಾರುಕಟ್ಟೆಯನ್ನು ಸ್ಥಾಳಾಂತರಿಸಬೇಕೆಂದು ಕೋರಿರುತ್ತಾರೆ. ಹಾಗೂ ಇದರಿಂದಾಗಿ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಲು ತುಂಬಾ ತೊಂದರೆ ಉಂಟಾಗುತ್ತಿರುತ್ತದೆ ಎಂದು ತಿಳಿಸಿರುತ್ತಾರೆ.

ತಿಕೊಳ್ಳಲು

## 3. ಆರೋಗ್ಯ ಇಲಾಖೆ

ಡಾ!!.ಅಕ್ಷ ರವರು ಮಾತನಾಡಿ, 12 ರಿಂದ 14ನೇ ವಯಸ್ಸಿನ ಮಕ್ಕಳಿಗೆ ಮಾರ್ಚ್ 16 ರಿಂದ Vaccanation ನೀಡಲಾಗುತ್ತಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಎರಡನೇ ಹಂತದ Vaccanation ನೀಡಲಾಗುತ್ತಿದ್ದು ಹಾಗೂ ಬೂಸ್ಟರ್ ಡೋಸ್‌ಅನ್ನು ಗಿರಿಯಮ್ಮ ಕೆಂಪಯ್ಯ ಆಸ್ಪತ್ರೆಯಲ್ಲಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಜನರು ಎರಡನೇ ಹಾಗೂ ಬೂಸ್ಟರ್ ಡೋಸ್‌ಅನ್ನು ತೆಗೆದುಕೊಳ್ಳುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರತಿ ತಿಂಗಳು 08ನೇ ತಾರೀಖಿನೆಂದು ಕ್ಯಾನ್ಸರ್ screening ನಡೆಸಲಾಗುವುದೆಂದು ತಿಳಿಸಿರುತ್ತಾರೆ. Routine immunisation for children below 0 to 2 yrs and OPD faculties have been done. ದಿನಾಂಕ: 21-03-2022 ರಂದು ಸಿದ್ದಯ್ಯ ಆಸ್ಪತ್ರೆಯ ಕ್ಯಾನ್ಸರ್ ರೋಗಕ್ಕೆ ಸಂಬಂಧಿಸಿದಂತೆ ಕಾಂಪ್‌ಅನ್ನು ಮಾಡಲಾಗುವುದೆಂದು ತಿಳಿಸಿರುತ್ತಾರೆ. ನಂತರದಲ್ಲಿ ಶ್ರೀ.ಚಿಕ್ಕನಾಗೇಶ ರವರು ಮಾತನಾಡಿ ಕಲಾಸಿಪಾಳ್ಯ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳ ಸುತ್ತಮುತ್ತ ಪ್ರದೇಶದಲ್ಲಿ ಬಾರ್ ಮತ್ತು ವೈನ್ ಸ್ಟೋರ್‌ಗಳು ಬೆಳ್ಳಿಗ್ಗೆ ವೇಳೆಯಲ್ಲಿ ತೆಗೆಯಲಾಗಿದ್ದು, ಇದರಿಂದಾಗಿ ಕುಡಿದ ಜನರು ಆಸ್ಪತ್ರೆ ಮೂತ್ರ ವಿಸರ್ಜನೆಯನ್ನು ಮಾಡುತ್ತಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

## 4. ಪೊಲೀಸ್ ಇಲಾಖೆ

ವಿನೋಭನಗರ ಸ್ಥಳೀಯರು ಶ್ರೀ.ಶಿವಕುಮಾರ್ ರವರು ಮಾತನಾಡಿ ಹೆಚ್.ಸಿದ್ದಯ್ಯರಸ್ತೆಯಲ್ಲಿ ಲಾರಿಗಳನ್ನು ನಿಲ್ಲಿಸಿರುವುದರಿಂದ ಈ ಜಾಗವು ಕಸ ಹಾಕುವ ಜಾಗವಾಗಿ ಬದಲಾವಣೆಯಾಗಿರುತ್ತದೆ. ಹಾಗೂ ಈ ಜಾಗಗಳಲ್ಲಿ ಓಡಾಡುವ ಜನರು ಮೂತ್ರ ವಿರ್ಸಜನೆಯನ್ನು ಮಾಡುತ್ತಿರುತ್ತಾರೆ. ಆದುದರಿಂದ ಈ ಕೂಡಲೇ ಈ ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಯಲ್ಲಿ ನಿಲ್ಲಿಸಿರುವ ವಾಹನಗಳಿಗೆ ದಂಡ ವಿಧಿಸಿ ತೆರವುಗೊಳಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿರುತ್ತಾರೆ, ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -118 ಸುಧಾಮನಗರ

19/3/22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118